ಮಧ್ಯಂತರ ಅರ್ಜಿ ಸಂಖ್ಯೆ-1ರ ಮೇಲೆ ಆದೇಶ

ಅರ್ಜಿದಾರರು/ಡಿಕ್ರಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151ರಡಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ರಾಜು ಬಿ. ವಕೀಲರನ್ನು ಕೋರ್ಟ ಕಮೀಷನರ್ ಎಂದು ನೇಮಕ ಮಾಡಿ ಅರ್ಜಿದಾರರ ಪರವಾಗಿ ನೊಂದಾಯಿತ ಕ್ರಯಪತ್ರ ಬರೆಸಿಕೊಡುವಂತೆ ನಿರ್ದೇಶನ ನೀಡಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ.

2. ಈ ಮಧ್ಯಂತರ ಅರ್ಜಿಯನ್ನು ಅರ್ಜಿದಾರರು/ಡಿಕ್ರಿದಾರರು ತಮ್ಮ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅವುಗಳಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಎದುರುದಾರ/ತೀರ್ಪುಋಣಿಗಳು ಮಧ್ಯಂತರ ಅರ್ಜಿ ಸಂಖ್ಯೆ-1ಕ್ಕೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

4. ಉಭಯಪಕ್ಷಗಾರರ ಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 ಅರ್ಜಿದಾರರು/ಡಿಕ್ರಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151ರಡಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಸಕಾರಣಗಳಿವೆ ಎಂದು ಸಾಬೀತುಪಡಿಸುವರೇ?

ಅಂಶ- 2 ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 ಸಕಾರಾತ್ಮಕವಾಗಿ

ಅಂಶ-2 ಅಂತಿಮ ಆದೇಶದಂತೆಃ

ಕಾರಣಗಳು

7. ಅಂಶ-1 - ಡಿಕ್ರಿದಾರರು ಮೂಲ ದಾವೆ ನಂ.60/2020 ನ್ನು ಎದುರುದಾರರ ವಿರುದ್ಧ ಕ್ರಯದ ಕರಾರು ನಿರ್ದಿಷ್ಟ ನಿರ್ವಹಣೆಗಾಗಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಉಭಯ ಪಕ್ಷಗಾರರು ಲೋಕ್ ಅದಾಲತ್‌ನಲ್ಲಿ ರಾಜಿ ಮಾಡಿಕೊಂಡಿದ್ದು, ಆ ಮೇರೆಗೆ ರಾಜಿ ಡಿಕ್ರಿಯಾಗಿದ್ದು, ಎದುರುದಾರರು ರಾಜಿ ಡಿಕ್ರಿಯ ಪ್ರಕಾರ ಡಿಕ್ರಿದಾರರ ಪರವಾಗಿ ದಾವಾ ಆಸ್ತಿಯ ಕುರಿತು ನೊಂದಣಿ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದು ಪ್ರಸ್ತುತ ಪ್ರಕರಣವನ್ನು ದಾಖಲಿಸಿದ್ದಾರೆ. ಎದುರುದಾರರು ವಕೀಲರ ಮೂಲಕ ಹಾಜರಾಗಿದ್ದರೂ ತಮ್ಮ ಪರವಾಗಿ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ನ್ಯಾಯಾಲಯದ ಕಮೀಷನರರವರನ್ನು ನೇಮಕ ಮಾಡಿ ಡಿಕ್ರಿದಾರರಿಗೆ ನೊಂದಣಿ ಕ್ರಯಪತ್ರ ಬರೆಸಿಕೊಡುವುದು ನ್ಯಾಯಸಮ್ಮತವೆಂದು ಕಂಡುಬರುತ್ತದೆ. ಡಿಕ್ರಿದಾರರ ಪರ ವಕೀಲರು ಅರ್ಜಿಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 10(ಬಿ)ರಡಿಯಲ್ಲಿ ಅರ್ಜಿ ಸಲ್ಲಿಸದೇ ಕ್ರಮಾದೇಶ 26 ನಿಯಮ 9 ರಡಿ ಅರ್ಜಿ ಸಲ್ಲಿಸಿದ್ದಾರೆ. ಪ್ರಕರಣವನ್ನು ಪರಿಣಾಮಕಾರಿಯಾಗಿ ನಿರ್ಣಯಿಸಲು ಮತ್ತು ಡಿಕ್ರಿದಾರರಿಗೆ ಡಿಕ್ರಿಯ ಮೇರೆಗೆ ಆದೇಶ ಮಾಡುವುದು ನ್ಯಾಯಸಮ್ಮತವೆಂದು ಕಂಡುಬರುವುದರಿಂದ ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

8. ಅಂಶ-2 - ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

## ಆದೇಶ

ಅರ್ಜಿದಾರರು/ಡಿಕ್ರಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 9 ಸಹವಾಚಕ ಕಲಂ 151ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಶ್ರೀ ರಾಜು ಬಿ. ವಕೀಲರು ಹರಿಹರ ಇವರನ್ನು ಕೋರ್ಟ ಕಮೀಷನರ್ ಆಗಿ ನೇಮಕ ಮಾಡಲಾಗಿದೆ.

ಕಮೀಷನರ್ ರವರಿಗೆ ರೂ.2,000/- ಶುಲ್ಕವನ್ನು ನಿಗದಿಪಡಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

Sd/-
(ಶಾರದಾದೇವಿ ಸಿ.ಹಟ್ಟಿ),
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಹರಿಹರ.